

# ಬೀಡಿ ಗ್ರಾಮದ ಹಿರಿಮೆ ಈ ಓದಿನ ಮನೆ

## ರಾಜ್ಯದ ಮಾದರಿ ಬಯಲು ಗ್ರಂಥಾಲಯ

■ ಸಂತೋಷ ಈ. ಚಿನಗುಡಿ

ಬೆಳಗಾವಿಯಿಂದ ಬೈಕ್ ಹತ್ತಿ ಬೀಡಿ ಗ್ರಾಮಕ್ಕೆ ಹೊರಟೆ. 50 ಕಿ.ಮೀ. ಕ್ರಮಿಸಿದ ಮೇಲೆ ಈ ಊರು ಸಿಕ್ಕಿತು. ಸುತ್ತ ಕಣ್ಣಾಡಿಸಿದಾಗ ಉದ್ಯಾನ ಕಂಡಿತು. ಒಳಗೆ ಹೋಗಿ ನೋಡಿದರೆ ಅದು ಉದ್ಯಾನವಲ್ಲ; ಗ್ರಾಮ ಪಂಚಾಯಿತಿ!

ಪಕ್ಕದಲ್ಲಿ ಮಕ್ಕಳ ಕಲರವ, ಹಕ್ಕಿಗಳ ಚಿಲಿಪಿಲಿ ಕೇಳಿಸಿತು. ಇನ್ನೊಂದು ಉದ್ಯಾನವೆಂದು ಇಣುಕಿದೆ. ಅದು ಕೂಡ ಉದ್ಯಾನವಲ್ಲ. ಬಯಲು ಗ್ರಂಥಾಲಯ!

ಆರು ವರ್ಷದ ಅನನ್ಯ ಹಾಗೂ ಎಂಟು ವರ್ಷದ ಆದಿತ್ಯ ಈ ಗ್ರಂಥಾಲಯದ ಹುಲ್ಲುಹಾಸಿನ ಮೇಲೆ ಉರುಳಾಡುತ್ತ ಆಟವಾಡುತ್ತಿದ್ದರು. ಗೋಡೆ ಮೇಲೆ ಬಿಡಿಸಿದ ಪೇಂಟಿಂಗುಗಳನ್ನು ತೋರಿಸಿ ಆದಿತ್ಯ ಅನನ್ಯಳನ್ನು ಅದಕ್ಕೇನಂತಾರ? ಇದಕ್ಕೇನಂತಾರ? ಎಂದು ಪ್ರಶ್ನೆ ಮಾಡುತ್ತಿದ್ದ. ಅದು ಎಲಿಫೆಂಟು, ಇದು ಜೀಬ್ರಾ, ಅದು ಪಿಕ್ಾಕು... ಎಂದು

